17705
15 MAR 2011

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಮುಧೋಳ ತಾಲ್ಲೂಕಿನ ಯಡಹಳ್ಳಿ ಇಂಗಳಗಿ ಹಾಗೂ ಬರಗಿ ಗ್ರಾಮಗಳಲ್ಲಿಯ ಸವಳು-ಜವಳು ಕ್ಷೇತ್ರವನ್ನು ಅಭಿವೃದ್ಧಿಪಡಿಸುವ ಕುರಿತು.

*******

ಓದಲಾಗಿದೆ:

ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು ಇವರ ಪತ್ರ ಸಂಖ್ಯೆ: ಕನೀನಿ/ಕಾಡಾ/ಸವಳು ಜವಳು/2010-11/3497, ದಿನಾಂಕ: 04-01-2011.

ಪ್ರಸ್ತಾವನೆ:

ಮೇಲೆ ಓದಲಾದ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ ರವರ ಪತ್ರದಲ್ಲಿ ಮುಖ್ಯ ಇಂಜಿನಿಯರ್, ನೀರಾವರಿ (ಉತ್ತರ) ವಲಯ, ಬೆಳಗಾವಿ ರವರು ಮುಧೋಳ ತಾಲ್ಲೂಕಿನ ಯಡಹಳ್ಳಿ, ಇಂಗಳಗಿ ಹಾಗೂ ಬರಗಿ ಗ್ರಾಮಗಳಲ್ಲಿಯ ಸವಳು-ಜವಳು ಕ್ಷೇತ್ರವನ್ನು ಅಭಿವೃದ್ಧಿಪಡಿಸುವ ಕುರಿತು ಈ ಕೆಳಕಂಡ ಕಾಮಗಾರಿಗಳನ್ನು ಕೈಗೊಳ್ಳಲು ಅನುಮೋದನೆ ನೀಡುವಂತೆ ಕೋರಿದ್ದು, ಸದರಿ ಪ್ರಸ್ತಾವನೆಗೆ ಅನುದಾನವನ್ನು ಒದಗಿಸಿ ಆಡಳಿತಾತ್ಮಕ ಅನುಮೋದನೆ ನೀಡುವಂತೆ ವ್ಯವಸ್ಥಾಪಕ ನಿರ್ದೇಶಕರವರು ಸರ್ಕಾರವನ್ನು ಕೋರಿರುತ್ತಾರೆ.

| ಕ್ರಮ ಸಂಖ್ಯೆ | ಕೆಲಸದ ಹೆಸರು | ಅಂದಾಜು ಮೊತ್ತ ಲಕ್ಷ ರೂ. | ಕ್ಷೇತ್ರ ಹೆಕ್ಟೇರು |
|---|---|---|---|
| 1 | ಮುಧೋಳ ತಾಲ್ಲೂಕಿನ ಇಂಗಳಗಿ ಗ್ರಾಮದ ಸವಳು-ಜವಳು ಬಾಧಿತ ಪ್ರದೇಶದ ಪುನರುತ್ಥಾನ Phase-I | 47.00 | 315.00 |
| 2 | ಮುಧೋಳ ತಾಲ್ಲೂಕಿನ ಇಂಗಳಗಿ ಯಡಹಳ್ಳಿ ಗ್ರಾಮದ ಸವಳು-ಜವಳು ಬಾಧಿತ ಪ್ರದೇಶದ ಪುನರುತ್ಥಾನ Phase-II | 32.00 | 215.00 |
| 3 | ಮುಧೋಳ ತಾಲ್ಲೂಕಿನ ಇಂಗಳಗಿ ಯಡಹಳ್ಳಿ, ಬರಗಿ ಗ್ರಾಮದ ಸವಳು-ಜವಳು ಬಾಧಿತ ಪ್ರದೇಶದ(ಉದ್ದಾರ ಹಳ್ಳ) ಪುನರುತ್ಥಾನ | 100.00 | 667.00 |
| | ಒಟ್ಟು | 179.00 | 1197.00 |

ಮೇಲ್ಕಂಡ ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಗಿನಂತೆ ಆದೇಶವನ್ನು ಹೊರಡಿಸಲಾಗಿದೆ.

...2..

ಸರ್ಕಾರದ ಆದೇಶ ಸಂಖ್ಯೆ: ಜಸಂಇ 1 ಎಂಪಿಎಸ್ 2011, ಬೆಂಗಳೂರು, ದಿನಾಂಕ: 14-03-2011.

ಮುಧೋಳ ತಾಲ್ಲೂಕಿನ ಯಡಹಳ್ಳಿ, ಇಂಗಳಗಿ ಹಾಗೂ ಬರಗಿ ಗ್ರಾಮಗಳಲ್ಲಿ ಸವಳು-ಜವಳು ಪರಿಸ್ಥಿತಿ ತುಂಬಾ ಹದಗೆಟ್ಟಿರುವುದರಿಂದ ಹಾಗೂ ಅವುಗಳನ್ನು ಸರಿಪಡಿಸುವ ಅವಶ್ಯಕತೆ ಇರುವುದರಿಂದ ಮೇಲ್ಕಂಡ ಸವಳು ಜವಳು ಅಭಿವೃದ್ಧಿ ಕಾಮಗಾರಿಗಳನ್ನು ಕರ್ನಾಟಕ ನೀರಾವರಿ ನಿಗಮದ ವತಿಯಿಂದ ರೂ. 179.00 ಲಕ್ಷಗಳ (ರೂಪಾಯಿ ಒಂದು ನೂರ ಎಪ್ಪತ್ತೊಂಭತ್ತು ಲಕ್ಷಗಳು ಮಾತ್ರ) ಮೊತ್ತದಲ್ಲಿ ಕೈಗೊಳ್ಳಲು ಈ ಕೆಳಕಂಡ ಷರತ್ತುಗಳೊಡನೆ ಸರ್ಕಾರದ ಅನುಮೋದನೆಯನ್ನು ನೀಡಲಾಗಿದೆ:-

1) ಸದರಿ ಪರಿಸ್ಥಿತಿಯನ್ನು ವೈಜ್ಞಾನಿಕವಾಗಿ ಅಧ್ಯಯನ ಮಾಡಿ, ವಿವರವಾದ ವರದಿ ತಯಾರಿಸಿಕೊಂಡು, Pilot ಯೋಜನೆಯನ್ನಾಗಿ ಕೈಗೆತ್ತಿಕೊಳ್ಳುವುದು;

2) ಇದರ ಅನುಭವ ಹಾಗೂ execution ಅನ್ನು ಉಳಿದ ಪ್ರದೇಶಗಳಿಗೆ Model ಆಗಿ ಅನುಸರಿಸುವುದು.

3) ಇದನ್ನು ಜಾರಿಗೊಳಿಸುವಾಗ ಪಾರದರ್ಶಕ ನಿಯಮಗಳನ್ನು [K.T.T.P Act] ಪಾಲಿಸತಕ್ಕದ್ದು.

2. ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ: ಆಇ 1 ಟಿಎಫ್‌ಪಿ 2008, ದಿನಾಂಕ: 16-05-2008 ರನ್ವಯ ಸರ್ಕಾರದ ಆಡಳಿತ ಇಲಾಖೆಯ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಿರುವ ಆರ್ಥಿಕ ಅಧಿಕಾರದ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಹೆಚ್.ಕೆ. ಸಂಪತ್‌ಕುಮಾರ್)
ವಿಶೇಷಾಧಿಕಾರಿ (ತಾಂತ್ರಿಕ-4),
ಜಲ ಸಂಪನ್ಮೂಲ ಇಲಾಖೆ.

14/3/11.

ಇವರಿಗೆ:

1. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಕಾಫಿ ಬೋರ್ಡ್ ಕಟ್ಟಡ, ಬೆಂಗಳೂರು-560001.
2. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು-3 ಪ್ರತಿಗಳು
3. ವಿಶೇಷಾಧಿಕಾರಿ ಮತ್ತು ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ, ಆರ್ಥಿಕ ಇಲಾಖೆ (ಲೋಕೋಪಯೋಗಿ ಆರ್ಥಿಕ ಕೋಶ), ವಿಧಾನ ಸೌಧ, ಬೆಂಗಳೂರು-1
4. ಮುಖ್ಯ ಇಂಜಿನಿಯರ್, ಕರ್ನಾಟಕ ನೀರಾವರಿ ನಿಗಮ ನಿಯಮಿತ, ನೀರಾವರಿ (ಉತ್ತರ), ಕ್ಲಬ್ ರಸ್ತೆ, ಬೆಳಗಾವಿ-590001
5. ಮಾನ್ಯ ಜಲ ಸಂಪನ್ಮೂಲ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು-1

...3..

6. ಸರ್ಕಾರದ ಉಪ ಕಾರ್ಯದರ್ಶಿ (ಕೃ.ಭಾ.ಜ.ನಿ.), ಜಲ ಸಂಪನ್ಮೂಲ ಇಲಾಖೆ, ವಿಕಾಸ ಸೌಧ, ಬೆಂಗಳೂರು-1
7. ಸರ್ಕಾರದ ಕಾರ್ಯದರ್ಶಿಗಳು, ಜಲ ಸಂಪನ್ಮೂಲ ಇಲಾಖೆ ರವರ ಆಪ್ತ ಸಹಾಯಕರು, ವಿಕಾಸ ಸೌಧ, ಬೆಂಗಳೂರು-1
8. ಆರಕ್ಷಕ ಮಹಾ ನಿರೀಕ್ಷಕರು, ವಿಚಕ್ಷಣಾ ದಳ, ಜಲ ಸಂಪನ್ಮೂಲ ಇಲಾಖೆ, ಬಸವ ಭವನ, ಹೈಗ್ರೌಂಡ್ಸ್, ಬೆಂಗಳೂರು-1
9. ಶಾಖಾ ರಕ್ಷಾ ಕಡತ/ಹೆಚ್ಚಿನ ಪ್ರತಿ.

*******